

## ಹವಿಗನ್ನಡದ ಸವಿ

ಕನ್ನಡ ಆಡುನುಡಿಯ ಸೊಗಸನ್ನು ಅರಳಿಸುವ 'ಹವಿಗನ್ನಡ' ಕರ್ನಾಟಕದ ದಕ್ಷಿಣ ಭಾಗದಲ್ಲಿ ಪ್ರಚಲಿತವಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅದು ಸಂಪರ್ಕ ಭಾಷೆಯಾಗಿಯೂ ಬೆಳೆದಿದೆ. ಕೃಷಿ ಸಂಸ್ಕೃತಿಯ ತಳಹದಿಯ ಮೇಲೆ ಅರಳಿರುವ ಈ ಭಾಷೆಯನ್ನು ಆಡುವ ಹವ್ಯಕ ಸಮುದಾಯವು ಸಾಹಿತ್ಯ ಮತ್ತು ಕಲೆಯಲ್ಲಿ ಸಮಾನವಾಗಿ ಆಸಕ್ತಿ ಹೊಂದಿರುವ, ಕೃಷಿ ಚಟುವಟಿಕೆಯನ್ನೇ ಆಧರಿಸಿದ ಸಮುದಾಯ. ಇತ್ತೀಚೆಗಿನ ವರ್ಷಗಳಲ್ಲಿ ಹವಿಗನ್ನಡದಲ್ಲಿ ಅನೇಕ ಕಥೆ, ಕಾದಂಬರಿಗಳು ಬಂದಿವೆ. ಕಾಸರಗೋಡಿನ ಚಂದ್ರಶೇಖರ ಭರಣ್ಯ ಅವರು ಹವಿಗನ್ನಡದಲ್ಲಿ ಕಥೆ, ಕಾದಂಬರಿಗಳನ್ನು ಬರೆದಿದ್ದಾರೆ. ಅನುಪಮಾ ರಾಘವೇಂದ್ರರ 'ಹತ್ತಗುಳು' ಕೃತಿ, 'ಹವಿ–ಸವಿ ನಿಘಂಟು', 'ಸಂಶೋಧನಾ ಅಧ್ಯಯನಗಳು' – ಹೀಗೆ, ಹವಿಗನ್ನಡದಲ್ಲಿಯೇ ಕೃತಿಗಳು ಬಂದಿವೆ. ಹವ್ಯಕ ಭಾಷಿಕ ಸಮುದಾಯಕ್ಕೆ ಸಂಬಂಧಿಸಿದ ಅಧ್ಯಯನಗಳೂ ಹಲವಾರು ಬಗೆಯಲ್ಲಿ ನಡೆದಿವೆ. ಸೌಮ್ಯ ಮಾತುಕತೆ, ಭಾಷಾ ಸೊಗಸನ್ನು ಸವಿಯುವ ಉತ್ಸಾಹ ಇರುವ ಈ ಸಮುದಾಯದಲ್ಲಿ ಇತ್ತೀಚೆಗೆ ಹವಿಗನ್ನಡ ಯಕ್ಷಗಾನ ಪ್ರಸಂಗಗಳೂ ಬಂದಿವೆ. ಹವಿಗನ್ನಡ ಸಮ್ಮೇಳನವನ್ನೂ ಆಯೋಜಿಸಿದ್ದುಂಟು. 'ಅಖಿಲ ಭಾರತ ಹವ್ಯಕ ಮಹಾಸಭಾ', 'ಹವ್ಯಕ ಅಧ್ಯಯನ ಕೇಂದ್ರ' ಮುಂತಾದವು ಭಾಷೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ನಿರಂತರ ಮಾಡುತ್ತ ಬಂದಿವೆ. ಕನ್ನಡದ ಚಿಗುರೊಂದು ಶಾಖೆಯಾಗಿ ವಿಕಾಸ ಹೊಂದುತ್ತ ಕನ್ನಡ ವೃಕ್ಷಕ್ಕೆ ಅಂದವನ್ನು ಕೊಟ್ಟಂತೆ ಇಂತಹ ಕೆಲಸಗಳು ನಡೆಯುತ್ತಲೇ ಇವೆ.

**–ನಾರಾಯಣ ಹೆಗಡೆ,** ಹವ್ಯಕ ಅಧ್ಯಯನ ಕೇಂದ್ರದ ಸ್ಥಾಪಕರು

ಹೊರತು ಶಿಷ್ಟತೆಯಿಂದಲ್ಲ.

ಬ್ಯಾರಿ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಮಹಮ್ಮದ್ ಹನೀಫ್ ಅವರ ಪ್ರಕಾರ, 'ಕನ್ನಡ ಸಂಸ್ಕೃತಿ ಇಲಾಖೆಯಡಿ ಬರುವ ವಿವಿಧ ಭಾಷಾ ಮತ್ತು ಸಾಂಸ್ಕೃತಿಕ ಅಕಾಡೆಮಿಗಳು ಕನ್ನಡವನ್ನೇ ಬಳಕೆಯ ಭಾಷೆಯನ್ನಾಗಿ ಮಾಡುವುದು ಒಳ್ಳೆಯದು. ಆಗ ಪ್ರಾದೇಶಿಕ ಭಾಷಾ ಸಮುದಾಯ ಮತ್ತು ಕನ್ನಡದ ನಡುವಿನ ಸಮನ್ವಯತೆ, ಕೊಳ್‌ಕೊಡುಗೆಯು ಇನ್ನಷ್ಟು ಸಮೃದ್ಧವಾಗುತ್ತದೆ. ಉಳಿದಂತೆ ಸ್ವತಂತ್ರವಾಗಿ ಲಿಪಿಗಳನ್ನು ಅಭಿವೃದ್ಧಿಪಡಿಸಬಾರದೆಂದೇನೂ ನಿಯಮ ಮಾಡಬಾರದು. ಬಹುತ್ವ ಇದ್ದಷ್ಟೂ ಸೌಂದರ್ಯವು ಹೆಚ್ಚುವುದು.'

ತುಳು, ಕೊರಗ, ಕೊಡವ, ಬಡಗ, ಸಿದ್ದಿ, ಕುರುಬ, ವರ್ಲಿ, ಚೆಂಚು, ಇರುಳ, ಗೌಳಿ, ಯರವ, ಸೋಲಿಗ, ಉರ್ದು, ಬ್ಯಾರಿ ಸೇರಿದಂತೆ, ಕನ್ನಡದ ಸಹಭಾಷೆಗಳ ಸಂರಕ್ಷಣೆಗೆ ಭಾಷಾನೀತಿ ರೂಪಿಸುವ ರಾಜ್ಯ ಸರ್ಕಾರದ ನಿರ್ಧಾರವು ಕಾರ್ಯಗತವಾದರೆ, ಈ ಗೊಂದಲವು ಪರಿಹಾರವಾಗಬಹುದು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರ ಪ್ರಕಾರ, ಕರ್ನಾಟಕದಲ್ಲಿ 230 ಉಪಭಾಷೆಗಳಿದ್ದು, ರೂಪುಗೊಳ್ಳಲಿರುವ ಹೊಸ ಭಾಷಾನೀತಿ ಇಂತಹ ಎಲ್ಲ ಭಾಷೆಗಳನ್ನು ಸಶಕ್ತಗೊಳಿಸಲು ನೆರವಾಗಲಿದೆ. 'ಕರ್ನಾಟಕವು ಭಾಷಾ ದೃಷ್ಟಿಯಿಂದ ಸಮೃದ್ಧವಾಗಿದ್ದರೂ, ಇಲ್ಲಿರುವ ಭಾಷೆಗಳು ಅಳಿವಿನಂಚಿನಲ್ಲಿವೆ ಎಂದು ಯುನೆಸ್ಕೋ ವರದಿ ಹೇಳಿದೆ. ಅಂದಮೇಲೆ, ಕನ್ನಡದ ಅಭಿವೃದ್ಧಿಗಾಗಿ ಸಹಕರಿಸಿದ ಭಾಷೆಗಳನ್ನು ಪೋಷಿಸುವ ಮೂಲಕ ಕನ್ನಡವನ್ನು ಇನ್ನಷ್ಟು ಸದೃಢಗೊಳಿಸುವ ಜವಾಬ್ದಾರಿ ಸರ್ಕಾರದ ಮೇಲಿದೆ. ಅದಕ್ಕಾಗಿ ಈ ಭಾಷಾನೀತಿ ಅಗತ್ಯ' ಎನ್ನುವುದು ಬಿಳಿಮಲೆ ಅವರ ಅಭಿಪ್ರಾಯ.

### ಹಚ್ಚೇವು ಕನ್ನಡದ ದೀಪ

ಹಲವು ರೂಪಗಳಲ್ಲಿ ಭಾಷೆ ಮತ್ತು ಸಾಂಸ್ಕೃತಿಕ ಏಳ್ಗೆಗೆ ಕರ್ನಾಟಕದಲ್ಲಿ ಇರುವ ಮುಕ್ತ ನೆಲೆಯು ಸಮನ್ವಯದ ಏಕಗೀತೆಯನ್ನು ಹಾಡುತ್ತಾ ಸಾಗುತ್ತಿದೆ ಎನ್ನುವುದೇ ಈ ನಾಡಿನ ಸೌಂದರ್ಯವಾಗಿದೆ. ಈ ಲೇಖನದಲ್ಲಿ ಉಲ್ಲೇಖಿಸಿರುವ ಭಾಷೆಗಳನ್ನು ಹೊರತಾಗಿಯೂ ನೂರಾರು ಭಾಷೆಗಳು ಕನ್ನಡದ ಧ್ವನಿಯನ್ನು ಬಲಪಡಿಸಲು ಒಂದಲ್ಲ ಒಂದು ರೀತಿಯ ಕೊಡುಗೆಯನ್ನು ನೀಡಿವೆ. ಅವುಗಳನ್ನು ಪ್ರತ್ಯೇಕವಾಗಿ ಎತ್ತಿ ಹಿಡಿಯಲು ವಿಷದವಾದ ಸಂಶೋಧನೆಯ ಅಗತ್ಯವಿದೆ. ಈ ಸೋದರ ಭಾಷೆಗಳಿಗೆ ಕನ್ನಡದಿಂದ ಬೇರ್ಪಡಿಸಲಾಗದ ತಾಯ್ಗರುಳಿನ ಸಂಬಂಧವಿದೆ ಎನ್ನುವುದಂತೂ ಸತ್ಯ. ಇತ್ತೀಚೆಗೆ ಸಾಮುದಾಯಿಕ ಅಸ್ಮಿತೆಯನ್ನು ಸಾಬೀತುಪಡಿಸುವ ಧ್ವನಿಯು ಗಟ್ಟಿಯಾಗಿ ಕೇಳುತ್ತಿದ್ದರೂ, ಕನ್ನಡದ ಕಾರಣವೊಂದು ಸೃಷ್ಟಿಯಾದಾಗ, ಈ ಎಲ್ಲ ಸಮುದಾಯಗಳು ಸಮುದ್ರದೆಡೆಗೆ ಚಲಿಸುವ ನದಿಗಳಂತೆ ಕನ್ನಡದ ಪರವಾಗಿ ನಿಲ್ಲುತ್ತವೆ.

ಕನ್ನಡ ಭಾಷೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ನಡೆಯುವ ಹೋರಾಟದ ಸಂದರ್ಭದಲ್ಲಿ, ಕನ್ನಡವು ಎದುರಿಸುವ ಸಮಸ್ಯೆಗಳು ಈ ಎಲ್ಲ ಭಾಷೆಗಳ ಸಮಸ್ಯೆಗಳೂ ಹೌದು. ಅಥವಾ ಕನ್ನಡಕ್ಕಿಂತಲೂ ಹೆಚ್ಚಾಗಿ ಇಂತಹ ಭಾಷೆಗಳಿಗೇ ಸಮಸ್ಯೆಯ ತೀವ್ರತೆ ತಟ್ಟುತ್ತದೆ. ಬಿಕ್ಕಟ್ಟು ಎದುರಾದಾಗ ಒಗ್ಗಟ್ಟಾಗುವ, ಸಮೃದ್ಧಿಯಿದ್ದಾಗ ಪರಸ್ಪರ ಬೆಳವಣಿಗೆಗೆ ಪೂರಕವಾಗಿ ನಿಲ್ಲುವ ಈ ಸಹಪಯಣದ ಸೊಗಸು ಕರ್ನಾಟಕ ಹಾಗೂ ಕನ್ನಡದ ಅನನ್ಯತೆಯೆಂದೇ ಹೇಳಬೇಕು.

ಪ್ರತಿಕ್ರಿಯಿಸಿ: feedback@sudha.co.in